**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालयः**

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ:ಅಧಿಸೂಚನೆ/ವಿ.ಮ.ವಿ.ಉ/ಪರೀಕ್ಷೆಗಳು/05/2016–17 ದಿನಾಂಕ: **31.08.2016**

## ಅಧಿಸೂಚನೆ

**ವಿಷಯ: 2016–17ನೇ ಸಾಲಿನಲ್ಲಿ ನಡೆಯಲಿರುವ ಸಂಸ್ಕೃತ/ವೇದ ಎಂ.ಎ. ವಿದ್ವದುತ್ತಮಾ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ಬ್ಯಾಂಕ್ ಹುಂಡಿ ಪಡೆಯುವ ದಿನಾಂಕ | ಬ್ಯಾಂಕ್ ಹುಂಡಿಗಳ ಸಹಿತ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ರವಾನಿಸುವ ದಿನಾಂಕ |
|---|---|---|
| **15.10.2016** | **18.10.2016** | **27.10.2016** |

**ಸೂಚನೆಗಳು:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅಧಿಕೃತ ಮಾನ್ಯತೆ ಪಡೆದ ಖಾಸಗಿ ಹಾಗೂ ಸರ್ಕಾರಿ ಸಂಸ್ಕೃತ ಕಾಲೇಜುಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.
2. ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು **"ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Karnataka Samskrit University, Bangalore)"** ಈ ಹೆಸರಿನಲ್ಲಿ ಪಡೆದು ನಿಗಧಿತ ದಿನಾಂಕದಂದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಿಗಧಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳು 2016–17ನೇ ಸಾಲಿನಲ್ಲಿರುವ ಹೊಸಪಠ್ಯಕ್ರಮದಂತೆ ನಡೆಯುತ್ತವೆ. **ಪುನರಾವರ್ತಿತ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮ ಅನ್ವಯವಾಗಿದ್ದು, ಅವರು ವಾರ್ಷಿಕ ಪದ್ದತಿಯಲ್ಲಿ ಪರೀಕ್ಷೆಯನ್ನು ಬರೆಯಬೇಕಾಗಿರುತ್ತದೆ. ಆದ ಕಾರಣ ಅವರು ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.**
4. ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಕಾಲೇಜು ವಿದ್ಯಾರ್ಥಿಗಳಿಗೆ (ರೆಗ್ಯುಲರ್) ವಿಶ್ವವಿದ್ಯಾಲಯವು ನೀಡಿರುವ ಅಧಿಕೃತ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು.
5. ಅರ್ಜಿಗಳೊಂದಿಗೆ ಸಲ್ಲಿಸುವ ನಾಮಾಂಕಿತ ಪಟ್ಟಿಯಲ್ಲಿ ಕೇಂದ್ರ ಸಂಖ್ಯೆ, ಹೆಸರು ಹಾಗೂ ಕಾಲೇಜಿನ ಸಂಕೇತ ಸಂಖ್ಯೆ, ಹೆಸರು ಹಾಗೂ ಸಮೀಪದ ಅಂಚೆ ಕಛೇರಿಯ ಪಿನ್‌ಕೋಡ್ ನಂಬರ್‌ಗಳನ್ನು ಸ್ಪಷ್ಟವಾಗಿ ನಮೂದಿಸುವುದು.
6. ಪರೀಕ್ಷೆ ತೆಗೆದುಕೊಳ್ಳುವ ಎಲ್ಲ ಅಭ್ಯರ್ಥಿಗಳಿಂದ ಇತ್ತೀಚಿನ ಎರಡು ಭಾವಚಿತ್ರಗಳನ್ನು ಪಡೆದು ಒಂದನ್ನು ಅರ್ಜಿಗೂ ಮತ್ತೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ಪ್ರಾಚಾರ್ಯರು ದೃಢೀಕರಿಸಿ ಕಳುಹಿಸುವುದು.
7. ತರಗತಿವಾರು ಪರೀಕ್ಷಾ ಶುಲ್ಕವನ್ನು ಅನುಬಂಧ–1ರಲ್ಲಿ ತಿಳಿಸಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಸಂಪೂರ್ಣ ವಿನಾಯಿತಿ

ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು. ಪ್ರಮಾಣಪತ್ರಗಳನ್ನು ಸಲ್ಲಿಸದಿದ್ದಲ್ಲಿ ಪೂರ್ಣ ಶುಲ್ಕವನ್ನು ಭರಿಸಬೇಕು. ಇಲ್ಲದಿದ್ದಲ್ಲಿ ಅರ್ಜಿ ತಿರಸ್ಕರಿಸಲಾಗುವುದು.

8. ಅರ್ಜಿಯಲ್ಲಿ ಕಡ್ಡಾಯವಾಗಿ ತಂದೆ ಹಾಗೂ ತಾಯಿಯ ಹೆಸರನ್ನು ನಮೂದಿಸುವುದು. ಜನ್ಮ ದಿನಾಂಕದ ನಕಲು ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು.
9. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು.
10. ಹಿಂದೆ ತೇರ್ಗಡೆಯಾಗಿರುವ ಯೋಗ್ಯತಾ ಪರೀಕ್ಷಾ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸುವುದು. (ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು).
11. ಯಾವುದೇ ಅಭ್ಯರ್ಥಿಗಳು ನೇರವಾಗಿ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಅಂತಿಮ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
12. ಹೊರ ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿ ಪ್ರಮಾಣ ಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರಮಾಣ ಪತ್ರವು ವಿಶ್ವವಿದ್ಯಾಲಯದ ಪ್ರವೇಶಾರ್ಹತೆಯ ನಿಯಮಾವಳಿಗೆ ಅನುಗುಣವಾಗಿದ್ದಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು, ಅನ್ಯಥಾ ತಿರಸ್ಕರಿಸಲಾಗುವುದು.
13. **ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬಂಧ ಮಾಹಿತಿಗಳನ್ನು Microsoft word, pdf, image ನಲ್ಲಿ ಕಳುಹಿಸಬಾರದು. ಕಡ್ಡಾಯವಾಗಿ ಆಂಗ್ಲಭಾಷೆಯಲ್ಲಿಯೇ Microsoft excel sheet ನಲ್ಲಿ ಕಳುಹಿಸಬೇಕು. Font size-12. ವಿದ್ಯಾರ್ಥಿಗಳ ಮಾಹಿತಿಯನ್ನು ಸಿ.ಡಿಯಲ್ಲಿ ಕಳುಹಿಸುವುದರ ಬದಲಾಗಿ** examksu2016@gmail.com **ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು. ಮತ್ತು ಪ್ರತಿಯನ್ನು (hard copy) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ–18 ಈ ವಿಳಾಸಕ್ಕೆ ಕಳುಹಿಸುವುದು.**
14. ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಪ್ರಥಮ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು. ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ 2 ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಬೇಕು.
15. ತರಗತಿವಾರು ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾಯ ಶಾಸ್ತ್ರಭಾಗಗಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವರ್ಷ ಹಾಗೂ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.
16. ವಿದ್ವದುತ್ತಮಾ ಎಂ.ಎ ಪ್ರಥಮ ಸೆಮಿಸ್ಟರ್ ಪರೀಕ್ಷೆಯಲ್ಲಿ ಪ್ರತಿಯೊಂದು ಪತ್ರಿಕೆಗಳಿಗೆ 100 ಅಂಕಗಳನ್ನು ನಿಗಧಿಪಡಿಸಲಾಗಿದ್ದು, ಅದರಲ್ಲಿ 70 ಅಂಕಗಳನ್ನು ಲಿಖಿತಪರೀಕ್ಷೆಗಾಗಿ ಹಾಗೂ, ಇನ್ನುಳಿದ 30 ಅಂಕಗಳನ್ನು ಆಂತರಿಕ ಪರೀಕ್ಷೆಗಳಿಗಾಗಿ (Assignment/ Project Work) ನಿಗದಿಪಡಿಸಲಾಗಿದೆ. ಈ ಆಂತರಿಕ ಪರೀಕ್ಷೆಗಳನ್ನು ಆಯಾಯ ಕಾಲೇಜುಗಳ ಪ್ರಾಚಾರ್ಯರೇ ನಡೆಸಿ ಆ ಅಂಕಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

17. ವಿಶ್ವವಿದ್ಯಾಲಯದಿಂದ ನೋಂದಣಿ ಸಂಖ್ಯೆಯನ್ನು ನೀಡಿದ ನಂತರ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪಟ್ಟಿಯನ್ನು ಪ್ರಾಚಾರ್ಯರು ದೃಢೀಕರಿಸಿ ಕಳುಹಿಸಿಕೊಡುವುದು ಆಂತರಿಕ ಮೌಲ್ಯಮಾಪನದ ಅಂಕಗಳಿಲ್ಲದ ಆವೇದನಪತ್ರಗಳನ್ನು ತಿರಸ್ಕರಿಸಲಾಗುವುದು.
18. ಅನುದಾನಿತ ಸಂಸ್ಕೃತ ಕಾಲೇಜುಗಳು ಹೊಸದಾಗಿ ಶಾಸ್ತ್ರವಿಭಾಗವನ್ನು ಪ್ರಾರಂಭ ಮಾಡಿದ್ದಲ್ಲಿ ವಿಶ್ವವಿದ್ಯಾಲಯದಿಂದ ಪಡೆದ ಅನುಮತಿ ಪತ್ರ ಲಗತ್ತಿಸತಕ್ಕದ್ದು ಮತ್ತು ಈ ಶಾಸ್ತ್ರಗಳು ಯಾವ ವರ್ಷದವರೆಗೆ ಮಾನ್ಯತೆ ಹೊಂದಿರುತ್ತದೆ ಎಂಬುದನ್ನೂ ತಿಳಿಸಬೇಕು ಹಾಗೂ ಅನುದಾನರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ಪತ್ರ ಲಗತ್ತಿಸಬೇಕು.
19. **ಶುಲ್ಕದ ವಿವರ:**

**ಅನುಬಂಧ–01**

| ಕ್ರ.ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ |
|---|---|---|---|---|---|
| 1. | ಎಂ.ಎ ಸಂಸ್ಕೃತ/ ವೇದ ವಿದ್ವದುತ್ತಮಾ | 470.00 | 10.00 | 20.00 | 500.00 |
| 2. | ಎಸ್.ಸಿ/ಎಸ್.ಟಿ./ ಪ್ರವರ್ಗ–1 ವಿದ್ಯಾರ್ಥಿಗಳಿಗೆ | – | 10.00 | 20.00 | 30.00 |

S/D
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು